## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ.

**SC.188/2025**

| **ಪಿರ್ಯಾದಿದಾರರು** | **ವಿರುದ್ಧ** | **ಆರೋಪಿ** |
|---|---|---|
| ರಾಜ್ಯ ಸರ್ಕಾರದ ಪರವಾಗಿ ಹೊನ್ನಾಳಿ ಪೋಲೀಸ್ | | ಆ.1. ಗುಡ್ಡು @ ಗುಡ್ಡು ಕಾಲಿಯಾ ತಂದೆ ಇಸ್ತಾಖ್ ಅಲಿ , 45 ವರ್ಷ, ಉದ್ಯೋಗ ವ್ಯಾಪಾರ, ವಾಸಃ ವಾರ್ಡ ನಂಬರು 7, ಕಕ್ಕರಲ ಗ್ರಾಮ, ದಟ್ಟಂಗಜ ತಾಲ್ಲೂಕು, ಬಡಾವ್ ಜಿಲ್ಲೆ, ಉತ್ತರ ಪ್ರದೇಶ.<br>ಆ.6. ಬಾಬು ಸಹಾ @ ಬಾಬು ಸರೇಲಿ ತಂದೆ ಬನ್ನೆ ಸಹಾ @ ಮನ್ನೆ ಸಹಾ, 50 ವರ್ಷ, ಉದ್ಯೋಗ ವ್ಯಾಪಾರ, ವಾಸಃ ನೌಲಿ ಗ್ರಾಮ, ಪಟ್ವಾಬಾದ್ ದಟ್ಟಂಗಜ ತಾಲ್ಲೂಕು, ಬಡಾವ್ ಜಿಲ್ಲೆ, ಉತ್ತರ ಪ್ರದೇಶ.<br>ಆ.7. ಹಫೀಜ್ @ ಅಪ್ ಜೀ @ ಅಫೀಜ್ ತಂದೆ ಸೈಯದ್ ಹುಸೇನ್, 38 ವರ್ಷ, ಉದ್ಯೋಗ ವ್ಯಾಪಾರ, ವಾಸಃ ಒಟ್ಟರಗುಂಟೆ ಗ್ರಾಮ, ಬಂಗಾರ ಪೇಟೆ ತಾಲ್ಲೂಕು, ಕೋಲಾರ್ ಜಿಲ್ಲೆ. |

### ದೋಷಾರೋಪಣೆ

ನಾನು ಶ್ರೀ **ಶ್ರೀರಾಮ ನಾರಾಯಣ ಹೆಗಡೆ,** ಬಿ.ಎ. ಎಲ್.ಎಲ್.ಎಂ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು–ಎಫ್.ಟಿ.ಎಸ್.ಸಿ–1, ದಾವಣಗೆರೆ ಹಾಗೂ C/c 1 ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶರು ದಾವಣಗೆರೆ ;–

ಆರೋಪಿಯಾದ ಆ.1. ಗುಡ್ಡು @ ಗುಡ್ಡು ಕಾಲಿಯಾ
ಆ.6. ಬಾಬು ಸಹಾ @ ಬಾಬು ಸರೇಲಿ,
ಆ.7. ಹಫೀಜ್ @ ಅಪ್ ಜೀ @ ಅಫೀಜ್

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ಹೊರಿಸುತ್ತೇನೆ.

1. ಮೊದಲನೇಯದಾಗಿ, ನೀವು ನಿಮ್ಮ ಏಕೋದ್ದೇಶದಿಂದ ಯಾವುದಾದರೂ ಬ್ಯಾಂಕಿನಲ್ಲಿ ಕಳ್ಳತನ ಮಾಡೋಣ ಅಂತ ನಿರ್ಧರಿಸಿ ಯುಪಿ– 24 ಎಯು–1365 ಹಾಗೂ

ಯುಪಿ-16, ಎಎಸ್-5712 ನೇ ಕಾರುಗಳಲ್ಲಿ ಕಳ್ಳತನಕ್ಕೆ ಬೇಕಾದ ಕಬ್ಬಿಣದ ರಾಡು, ಖಾರದ ಪುಡಿ , ಚಾಕು, ಮಂಕಿ ಕ್ಯಾಪ್ ಗಳು , ಹ್ಯಾಂಡ್ ಗ್ಲೌಸ್ ಮತ್ತು ಬ್ಯಾಟರಿಗಳನ್ನು ಮತ್ತು 5 ನೇ ಆರೋಪಿ ಒಂದು ಪಿಸ್ತೂಲ್ ಮತ್ತು ಗುಂಡುಗಳನ್ನು ತೆಗೆದುಕೊಂಡು ಕರ್ನಾಟದಲ್ಲಿ ಭದ್ರತೆ ಇಲ್ಲದ ಸೆಕ್ಯುರಿಟಿಗಳು ಇಲ್ಲದ ಬ್ಯಾಂಕುಗಳನ್ನು ಹುಡುಕಾಡಿ ನ್ಯಾಮತಿ ತಾಲ್ಲೂಕು ಸವಳಂಗ ಗ್ರಾಮದಲ್ಲಿ ಎಸ್.ಬಿ.ಐ. ಬ್ಯಾಂಕ್ ಬಳಿ ತಿರುಗಾಡಿ ಅಲ್ಲಿ ಅಷ್ಟಾಗಿ ಭದ್ರತೆ ಇರುವುದಿಲ್ಲವೆಂಬ ಮಾಹಿತಿ ಸಂಗ್ರಹಿಸಿ ಬ್ಯಾಂಕ ದರೋಡೆ ಮಾಡಲು ಮೇಲ್ಕಂಡ ಕಾರುಗಳಲ್ಲಿ ಈ ಮೇಲೆ ಹೇಳಿದ ಸಲಕರಣೆಗಳನ್ನು ತೆಗೆದುಕೊಂಡು ದಿ.15.03.2025 ರಂದು ದಾವಣಗೆರೆ ಹರಿಹರ ಕಡೆಯಿಂದ ಹೊನ್ನಾಳಿ ಕಡೆಗೆ ಬಂದಿದ್ದು ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ.310(4) ಸಹ ಕಲಂ.190** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

2. ಎರಡನೇಯದಾಗಿ, ನೀವು ನಿಮ್ಮ ಏಕೋದ್ದೇಶದಿಂದ ಈ ಮೇಲೆ ಹೇಳಿದಂತೆ ಬ್ಯಾಂಕ್ ದರೋಡೆ ಮಾಡಲು ಆರೋಪಿ ನಂ.2 ರಿಂದ 5 ರವರ ಜೊತೆ ಸೇರಿ ಸಂಚು ನಡೆಸಿದ್ದು ನೀವೆಲ್ಲ ಆ ಅಕ್ರಮ ಕೂಟದ ಸದಸ್ಯರಾಗಿದ್ದು ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ.310(5) ಸಹ ಕಲಂ.190** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

3. ಮೂರನೇಯದಾಗಿ, ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯ ಹೆಚ್. ಕಡದಕಟ್ಟೆ ಗ್ರಾಮದ ಸಮೀಪ ಹೊನ್ನಾಳಿ ನ್ಯಾಮತಿ ಮುಖ್ಯ ರಸ್ತೆಯಲ್ಲಿ ಚೆಕ್ ಪೋಸ್ಟ ಹಾಕಿ ಬ್ಯಾರಿಕೇಡ್ ಗಳನ್ನು ಅಳವಡಿಸಿಕೊಂಡು ಸಾಕ್ಷಿ-7 ರಾಜಶೇಖರ ಎ.ಬಿ. ಸಿ.ಹೆಚ್.ಸಿ. 203, ಸಾಕ್ಷಿ-8 ಬಸವರಾಜ ಕೋಟೆಪ್ಪನವರ್ ಸಿ.ಹೆಚ್.ಸಿ.263 ರವರುಗಳು ವಾಹನ ತಪಾಸಣೆ ಮಾಡುತ್ತಿರುವಾಗ ದಿ.16.03.2025 ರಂದು 1.00 ಗಂಟೆ ಸಮಯದಲ್ಲಿ ಸಾಕ್ಷಿ-1 ರವರು ಸಾಕ್ಷಿ-4, 5, 6 ರವರೊಂದಿಗೆ ಕೆಎ-17 ಜಿ.0756 ರ ಇಲಾಖಾ ಜೀಪಿನಲ್ಲಿ ಚೆಕ್ ಪೋಸ್ಟ ಬಳಿ ಬಂದು ಸಾಕ್ಷಿ-7, 8 ರವರೊಂದಿಗೆ ತಪಾಸಣೆ ಮಾಡುತ್ತಾ ಇರುವಾಗ ನೀವು ನಿಮ್ಮ ಏಕೋದ್ದೇಶದಿಂದ ಮಧ್ಯ ರಾತ್ರಿ 1.35 ರ ಸಮಯದಲ್ಲಿ ಹೊನ್ನಾಳಿ ಕಡೆಯಿಂದ ನೀವು ಈ ಮೇಲೆ ಹೇಳಿದ ಎರಡು ಕಾರುಗಳಲ್ಲಿ ಜೋರಾಗಿ ಮತ್ತು ಅಜಾಗರೂಕತೆಯಿಂದ ಬಂದಿದ್ದು ಆಗ ಸಾಕ್ಷಿ-7, 8 ರವರು ಕಾರನ್ನು ನಿಲ್ಲಿಸಲು ಸೂಚನೆ ನೀಡಿದರೂ ಸಹ ನೀವು ಕಾರನ್ನು ನಿಲ್ಲಿಸದೇ ನ್ಯಾಮತಿ ಕಡೆಗೆ ಹೋಗಿದ್ದು ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ.281 ಸಹ ಕಲಂ.190** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

4. ನಾಲ್ಕನೇಯದಾಗಿ ಸಾಕ್ಷಿ-1 ರವರು ಕೂಡಲೇ ಹೊನ್ನಾಳಿ ಬಸ್ ನಿಲ್ದಾಣದಲ್ಲಿ ವಾಹನ ತಪಾಸಣೆ ಮಾಡುತ್ತಿದ್ದ ಸಾಕ್ಷಿ-9 ರವರಿಗೆ ಈ ವಿಚಾರ ತಿಳಿಸಿದ್ದು ನಂತರ ಸಾಕ್ಷಿ-10 ರಿಂದ 15 ರವರಿಗೆ ನ್ಯಾಮತಿ ಕಡೆಗೆ ಬರುವಂತೆ ಹೇಳಿ, ತಮ್ಮ ಜೀಪಿನಲ್ಲಿ ನಿಮ್ಮ ಕಾರನ್ನು ಬೆನ್ನತ್ತಿಕೊಂಡು ಹೋಗಿ ಮಧ್ಯ ರಾತ್ರಿ 1.40 ರ ಸುಮಾರಿಗೆ ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅರಬಕಟ್ಟೆ ಕ್ರಾಸ್ ಬಳಿ ಸೊರಟೂರು ಗ್ರಾಮದ ಕಡೆಗೆ ರಸ್ತೆಯಲ್ಲಿ ಹೋಗುತ್ತಿದ್ದ ನಿಮ್ಮ ಎರಡು ಕಾರುಗಳನ್ನು ಓವರ್ ಟೇಕ್ ಮಾಡಿ ನಿಲ್ಲಿಸಿದ್ದು ಆಗ ನೀವು ನಿಮ್ಮ ಏಕೋದ್ದೇಶದಿಂದ ಕಾರಿನಿಂದ ಇಳಿದು ರಸ್ತೆಯ ಎರಡೂ ಬದಿಯಲ್ಲಿನ ಜಮೀನುಗಳಲ್ಲಿ ಓಡಿ ಹೋಗಲು ಪ್ರಾರಂಭಿಸಿದ್ದು ಆಗ 1 ನೇ ಆರೋಪಿಯಾದ ನೀವು ನಿಮ್ಮನ್ನು ಹಿಡಿಯಲು ಬೆನ್ನತ್ತಿದ್ದ ಸಾಕ್ಷಿ-4 ಆನಂದ ಸಿ.ಪಿ.ಸಿ.577 ರವರಿಗೆ ಸೊರಟೂರು ಗ್ರಾಮದ ಸರ್ವೆ ನಂಬರು 96/4 ರ ಜಮೀನಿನಲ್ಲಿ ನಿಮ್ಮ ಕೈಯಲ್ಲಿದ್ದ ಮಚ್ಚಿನಿಂದ ಹಲ್ಲೆ ಮಾಡಲು ಹೋದಾಗ ಸಾಕ್ಷಿ-1 ರವಿ ಎನ್.ಎಸ್. ತಮ್ಮ ಬಳಿ ಇದ್ದ ಇಲಾಖಾ ಪಿಸ್ತೂಲಿನಿಂದ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ ನಿಮಗೆ ಶರಣಾಗುವಂತೆ ಹಿಂದಿ ಮತ್ತು ಕನ್ನಡ ಭಾಷೆಯಲ್ಲಿ ಕೂಗಿ ಹೇಳಿದ್ದು ಆದರೆ ನೀವು ಕೇಳದೇ ಸಾಕ್ಷಿ-4 ರವರಿಗೆ ಮಚ್ಚಿನಿಂದ ಎಡಗೈ ಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿದ್ದು ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ.121(1) ಮತ್ತು 132 ಸಹ ಕಲಂ.190** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

5. ಐದನೇಯದಾಗಿ, ಈ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಸಾಕ್ಷಿ-4 ರವರು ಕೆಳಗಡೆ ಬಿದ್ದಿದ್ದು ಆಗ ನಿಮ್ಮ ಏಕೋದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿ ಅವರನ್ನು ಕೊಲೆ ಮಾಡುವ ಉದ್ದೇಶದಿಂದ ಪುನಃ ಮಚ್ಚಿನಿಂದ ಹಲ್ಲೆ ಮಾಡಲು ಮುಂದಾಗಿದ್ದು ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ.109(1) ಸಹ ಕಲಂ.190** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

6. ಆರನೇಯದಾಗಿ, ನೀವು ನಿಮ್ಮ ಏಕೋದ್ದೇಶದಿಂದ ಯಾವುದಾದರೂ ಬ್ಯಾಂಕಿನಲ್ಲಿ ಕಳ್ಳತನ ಮಾಡೋಣ ಅಂತ ನಿರ್ಧರಿಸಿ ಯುಪಿ- 24 ಎಯು-1365 ಹಾಗೂ ಯುಪಿ-16, ಎಎಸ್-5712 ನೇ ಕಾರುಗಳಲ್ಲಿ ಕಳ್ಳತನಕ್ಕೆ ಬೇಕಾದ ಕಬ್ಬಿಣದ ರಾಡು, ಒಂದು ಪಿಸ್ತೂಲ್ ಮತ್ತು ಗುಂಡುಗಳನ್ನು ಅಕ್ರಮವಾಗಿ ಇಟ್ಟುಕೊಂಡಿದ್ದು ಆ ಮೂಲಕ ನೀವು **ಅಕ್ರಮ ಶಸ್ತ್ರಾಸ್ತಗಳ ಕಾಯಿದೆ ಕಲಂ 25(1A) ಸಹವಾಚಕ ಕಲಂ 7 ಮತ್ತು ಭಾರತೀಯು ನ್ಯಾಯ ಸಂಹಿತೆ ಕಲಂ.190** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

7. ಏಳನೇಯದಾಗಿ , ಈ ಮೇಲೆ ಹೇಳಿದ ಶಸ್ತ್ರಾಸ್ತಗಳನ್ನು ನೀವು ನಿಮ್ಮ ಏಕೋದ್ದೇಶದಿಂದ ಈ ಮೇಲೆ ಹೇಳಿದಂತೆ ಅಕ್ರಮವಾಗಿ ಉಪಯೋಗಿಸಿದ್ದು ಆ ಮೂಲಕ ನೀವು

**<u>ಅಕ್ರಮ ಶಸ್ತ್ರಾಸ್ತಗಳ ಕಾಯಿದೆ ಕಲಂ 27(2) ಸಹವಾಚಕ ಕಲಂ 7 ಮತ್ತು ಭಾರತೀಯು ನ್ಯಾಯ ಸಂಹಿತೆ ಕಲಂ.190</u>** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

8. ಈ ಮೇಲೆ ಹೇಳಿದ ಆರೋಪಗಳಿಗೆ ನೀವು ನನ್ನಿಂದ ವಿಚಾರಣೆಗೆ ಒಳಪಡಬೇಕು ಅಂತಾ ನಿರ್ದೇಶಿಸುತ್ತೇನೆ.

(ಈ ದಿನ ದಿನಾಂಕ.09-04-2026 ರಂದು ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಅರ್ಥವಾಗುವಂತೆ ಕನ್ನಡ ಮತ್ತು ಹಿಂದಿ ಭಾಷೆಯಲ್ಲಿ ಓದಿ, ತಿಳಿಸಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದಾಗಿ ಈ ಮೂಲಕ ದೃಡೀಕರಿಸುತ್ತೇನೆ.)

SD/-
(ಶ್ರೀರಾಮ ನಾರಾಯಣ ಹೆಗಡೆ)
C/c 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.